ಕಂದಾವರ ಗ್ರಾಮದ ಧೂಮಾವತಿ ದೇವಸ್ಥಾನದಿಂದ ಮೂರು ತೋಡು ಮಸೀದಿವರೆಗೆ ದೊಡ್ಡ ತೋಡಿನಿಂದ ಹೂಳೆತ್ತಿ ತಡೆಗೋಡೆ ನಿರ್ಮಿಸುವ ಕಾಮಗಾರಿಯನ್ನು ರೂ.32.50 ಲಕ್ಷಗಳ ಅಂದಾಜು ಮೊತ್ತದಲ್ಲಿ ನಬಾರ್ಡ್ ಆರ್.ಐ.ಡಿ.ಎಫ್.15 ರಡಿ ಕೈಗೆತ್ತಿಕೊಳ್ಳಲಾಗಿದೆ.

ಜಾಗತಿಕ ಬಂಡವಾಳ ಹೂಡಿಕೆ

8(27) ಶ್ರೀ ಜಮೀರ್ ಅಹಮದ್ ಖಾನ್ ಬಿ ಝಡ್:(ಚಾಮರಾಜಪೇಟೆ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ದಿನಾಂಕ 3 ಮತ್ತು 4ನೇ ಜೂನ್ 2010 ರಂದು ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಕಂಪನಿಗಳಿಗೆ ಅವಶ್ಯಕತೆ ಇರುವ ನೀರಿನ ಪ್ರಮಾಣವನ್ನು ನಿರ್ಧರಿಸಲಾಗಿದೆಯೇ?

ಆ) ನಿರ್ಧರಿಸಿದಲ್ಲಿ, ಅಗತ್ಯವಿರುವ ನೀರನ್ನು ಪೂರೈಸಲು ಸರ್ಕಾರವು ಬೃಹದ್ಯೋಜನೆಯನ್ನು ತಯಾರಿಸಲಾಗಿದೆಯೇ?

ಇ) ತಯಾರಿಸಲಾಗಿದ್ದಲ್ಲಿ ಅದರ ರೂಪರೇಷಗಳೇನು; (ವಿವರಗಳನ್ನು ನೀಡುವುದು)

ಶ್ರೀ ಮುರುಗೇಶ್ ಆರ್ ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹೌದು. ಈ ಯೋಜನೆಗಳಿಗೆ ಸುಮಾರು 3338 ಎಂಎಲ್‌ಡಿ (ದಶಲಕ್ಷ ಲೀಟರ್ ಪ್ರತಿ ದಿನ) ನೀರು ಬೇಕಾಗುತ್ತದೆ.

ಆ) & ಇ) ಜಲ ಸಂಪನ್ಮೂಲ ಇಲಾಖೆ ಈ ಸಂಬಂಧ ವರದಿ ಸಲ್ಲಿಸಲು ತಾಂತ್ರಿಕ ಸಮಿತಿಯೊಂದನ್ನು ದಿನಾಂಕ: 10.06.2010, ಆದೇಶ ಸಂಖ್ಯೆ: ಜಸಂಇ 110 ಕೆಬಿಎನ್ 2010, ಮೂಲಕ ರಚಿಸಲಾಗಿದೆ.

9(29) ಶ್ರೀ ಪುಟ್ಟೇಗೌಡ ಸಿ ಎಸ್:(ಶ್ರವಣ ಬೆಳಗೊಳ) [ವಿಧಾನ ಸಭೆಯಿಂದ ಚುನಾಯಿತರಾದವರು] ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದಿನಾಂಕ 3 ಮತ್ತು 4ನೇ ಜೂನ್ 2010 ರಂದು ನಡೆದ ಜಾಗತಿಕ ಬಂಡವಾಳ ಹೂಡಿಕೆಗಾಗಿ ನಡೆದ ಸಮಾರಂಭಕ್ಕೆ ಆಗಮಿಸಿದ ಅತಿ ಗಣ್ಯ ವ್ಯಕ್ತಿಗಳಿಗೆ ಊಟದ ವ್ಯವಸ್ಥೆ ಹಾಗೂ ವಸತಿ ವ್ಯವಸ್ಥೆ ಹಾಗೂ ಸಾರಿಗೆ ವ್ಯವಸ್ಥೆ ಹಾಗೂ ಇತರೆ ವ್ಯವಸ್ಥೆಗಳಿಗಾಗಿ ಖರ್ಚು ಮಾಡಲಾದ ಹಣವೆಷ್ಟು ಹಾಗೂ ಈ ಕೆಲಸಕ್ಕೆ ಗುತ್ತಿಗೆ ಪಡೆದ ಗುತ್ತಿಗೆದಾರರ ಹೆಸರು ಹಾಗೂ ಗುತ್ತಿಗೆ ನೀಡುವ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು, ವಿಳಾಸ ಸಹಿತ ಪೂರ್ಣ ಮಾಹಿತಿ ನೀಡುವುದು.

ಆ) ಜಾಗತಿಕ ಬಂಡವಾಳ ಹೂಡಿಕೆಗಾಗಿ ನಡೆದ ಸಮಾರಂಭಕ್ಕೆ ವೇದಿಕೆ ಹಾಗೂ ಪೆಂಡಾಲ್ ಹಾಗೂ ಇತರೆ ಭಾಗಗಳಲ್ಲಿ ಪ್ರಚಾರ ಫಲಕಗಳು ಹಾಗೂ ಸರ್ಕ್ಯೂಟ್ ಟಿ.ವಿ. ಇತರೆ ವ್ಯವಸ್ಥೇಗಳಿಗಾಗಿ ಖರ್ಚು ಮಾಡಲಾದ ಹಣವೆಷ್ಟು ಹಾಗೂ ಗುತ್ತಿಗೆ ಪಡೆದ ಗುತ್ತಿಗೆದಾರರ ಹೆಸರು ಹಾಗೂ ಭಾಗವಹಿಸಿದ ಗುತ್ತಿಗೆದಾರರ ಹೆಸರು, ವಿಳಾಸ ಸಹಿತ ಪೂರ್ಣ ಮಾಹಿತಿ ನೀಡುವುದು?

ಶ್ರೀ ಮುರುಗೇಶ್ ಆರ್ ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ರಾಜ್ಯದಲ್ಲಿ 3 ಮತ್ತು 4ನೇ ಜೂನ್ 2010 ರಂದು ನಡೆದ ಜಾಗತಿಕ ಬಂಡವಾಳ ಹೂಡಿಕೆಗಾಗಿ ನಡೆದ ಸಮಾರಂಭಕ್ಕೆ ಆಗಮಿಸಿದ ಅತಿ ಗಣ್ಯವ್ಯಕ್ತಿಗಳಿಗೆ ಹಾಗೂ ಗಣ್ಯ ವ್ಯಕ್ತಿಗಳಿಗೆ ವ್ಯವಸ್ಥೆ ಹಾಗೂ ಇತರೆ ವ್ಯವಸ್ಥೆಗಳ ವೆಚ್ಚ ರೂ.4,52,29,294/–ಗಳಾಗಿರುತ್ತದೆ. ವಿವರಗಳ ಪಟ್ಟಿಯನ್ನು ಲಗತ್ತಿಸಿದೆ. ಅನುಬಂಧ – ಎ

ಆ) ಜಾಗತಿಕ ಬಂಡವಾಳ ಹೂಡಿಕೆಗಾಗಿ ನಡೆದ ಸಮಾರಂಭಕ್ಕೆ ವೇದಿಕೆ ಹಾಗೂ ಫೆಂಡಾಲ್ ವ್ಯವಸ್ಥೆಗೆ (ತೆರಿಗೆಗಳು ಸೇರಿ) ಸಂಬಂಧಪಟ್ಟಂತೆ ರೂ. 8.49 ಕೋಟಿ ಬಿಲ್ಲು ಬಂದಿದೆ. ಸದರಿ ಬಿಲ್ಲು ಪರಿಶೀಲನೆಯಲ್ಲಿದೆ.

ಈ ಕೆಲಸವನ್ನು ಸರ್ಕಾರದ ಅಂಗಸಂಸ್ಥೆಯಾದ ಮೆ. ಎಂ.ಸಿ. & ಎ. ರವರಿಗೆ ಪಾರದರ್ಶಕ ಅಧಿನಿಯಮದಡಿ ವಿನಾಯ್ತಿ ಪಡೆದು ನೇರವಾಗಿ ನೀಡಲಾಗಿರುತ್ತದೆ. ಸದರಿ ಸಂಸ್ಥೆಯವರು ಕರೆಯಲಾದ ಟೆಂಡರ್‌ನಲ್ಲಿ ಮೆ.ಅಮಾನುಲ್ಲಾ ಖಾನ್ಸ್ ಸನ್ಸ್ ಸಂ.144, ರಸಲ್ ಮಾರ್ಕೆಟ್ ಸ್ಕ್ವೇರ್,

ಬೆಂಗಳೂರು–560 051 ಮತ್ತು ಮೆ/ ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ (ಪೈ) ಲಿಮಿಟೆಡ್, ಸಂ.407, 8 'ಬಿ' ಮೈನ್, 4ನೇ ಬ್ಲಾಕ್, ವಿಜಯನಗರ, ಬೆಂಗಳೂರು– 560 011 ಟೆಂಡರ್‌ನಲ್ಲಿ ಭಾಗವಹಿಸಿದ್ದು ಈ ಗುತ್ತಿಗೆಯನ್ನು ಮೆ/ ಅಮಾನುಲ್ಲಾ ಖಾನ್ಸ್ ಸನ್ಸ್ ಬೆಂಗಳೂರು ರವರಿಗೆ ನೀಡಲಾಗಿದೆ.

ಪ್ರಚಾರ ಫಲಕಗಳಿಗೆ ರೂ.1.60,66.556/– ಗಳನ್ನು ವೆಚ್ಚ ಮಾಡಲಾಗಿದೆ ಹಾಗೂ ಸಿಸಿ ಟಿವಿಗಳಿಗೆ ರೂ.11,00,000/–ಗಳನ್ನು ವೆಚ್ಚ ಮಾಡಲಾಗಿದೆ. ವಿವರಗಳ ಪಟ್ಟಿಯನ್ನು ಲಗತ್ತಿಸಿದೆ. ಅನುಬಂಧ – ಬಿ

ಊಟ, ವಸತಿ, ಸಾರಿಗೆ ವೆಚ್ಚದ ವಿವರಗಳ ಪಟ್ಟಿ

ಎ) ಊಟದ ವ್ಯವಸ್ಥೆ

ಕ್ರಮ ಸಂಖ್ಯೆ	ವಿವರಗಳು	ಒಟ್ಟು ವೆಚ್ಚ – ರೂ. ತೆರಿಗೆಗಳು ಸೇರಿ
1.	ಮೆ.ಐಟಿಸಿ ಲಿಮಿಟೆಡ್ – ದಿ ವಿಂಡ್ಸರ್, ವಿಂಡ್ಸ್ರ್ ಸ್ಕ್ವೇರ್, 25, ಗಾಲ್ಫ್‌ಕೋರ್ಸ್ ರಸ್ತೆ, ಬೆಂಗಳೂರು–560 052	37691605/–
2.	ಮೆ. ಗೋಲ್ಡ್ ಫಿಂಚ್ ಹೋಟೆಲ್, ಕ್ರೆಸೆಚಿಟ್ ರಸ್ತೆ, ಬೆಂಗಳ್ರರು	192131/–
3.	ಮೆ. ದಿ ತಾಜ್ ವೆಸ್ಟೆಂಡ್ ಹೋಟೆಲ್, 25, ರೇಸ್‌ಕೋರ್ಸ್ ರಸ್ತೆ, ಬೆಂಗಳ್ರರು	246455/–
4.	ಮೆ. ಏಟ್ರಿಯಾ ಹೋಟೆಲ್, ಪ್ಯಾಲೇಸ್ ರಸ್ತೆ, ಬೆಂಗಳ್ರರು	31882/–
	ಒಟ್ಟು	**38162073/–**

ಬಿ) ವಸತಿ ವ್ಯವಸ್ಥೆ

ಕ್ರಮ ಸಂಖ್ಯೆ	ವಿವರಗಳು	ಒಟ್ಟು ವೆಚ್ಚ – ರೂ. ತೆರಿಗೆಗಳು ಸೇರಿ
1.	ಮೆ.ಐಟಿಸಿ ಲಿಮಿಟೆಡ್ – ದಿ ವಿಂಡ್ಸರ್, ವಿಂಡ್ಸ್ರ್ ಸ್ಕ್ವೇರ್, 25, ಗಾಲ್ಫ್‌ಕೋರ್ಸ್	2252614/–

	ರಸ್ತೆ, ಬೆಂಗಳೂರು–560 052	
2.	ಮೆ. ಗೋಲ್ಡ್ ಫಿಂಚ್ ಹೋಟೆಲ್, ಕ್ವಸೆಚಿಟ್ ರಸ್ತೆ, ಬೆಂಗಳ್ರರು	234479/–
3.	ಮೆ. ದಿ ತಾಜ್ ವೆಸ್ಟೆಂಡ್ ಹೋಟೆಲ್, 25, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು	3494585/–
4.	ಮೆ. ಏಟ್ರಿಯಾ ಹೋಟೆಲ್, ಪ್ಯಾಲೇಸ್ ರಸ್ತೆ, ಬೆಂಗಳ್ರರು	63453/–
	ಒಟ್ಟು	**6045131/–**

ಸಿ) ಸಾರಿಗೆ ವ್ಯವಸ್ಥೆ

ಕ್ರಮ ಸಂಖ್ಯೆ	ವಿವರಗಳು	ಗುತ್ತಿಗೆಯನ್ನು ಪಡೆದವರ ವಿವರಗಳು	ಒಟ್ಟು ವೆಚ್ಚ – ರೂ. ತೆರಿಗೆಗಳು ಸ್ಟೆರಿ
1.	ಮೆ.ಗೋಲ್ಡನ್ ಟ್ರಾವಲ್ಸ್, 169, ಪ್ರಕಾಸ್ ನಗರ ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–21	ಮೆ. ಮಾನ್ಯ ಟೂರ್ಸ್ ಅಂಡ್ ಟ್ರಾವಲ್ಸ್, 914, 14ನೇ ಮೈನ್, 4ನೇ ಅಡ್ಡರಸ್ತೆ, ಮಾರುತಿ ಸರ್ಕಲ್, ಹನುಮಂತನಗರ, ಬೆಂಗಳೂರು–560 019	1022090 /–
2.	ಮೆ.ಕ್ಯಾಬ್ಸ್ ಇಂಡಿಯಾ ಟೂರ್ಸ್ ಅಂಡ್ ಟ್ರಾವಲ್ಸ್, ನಂ.18/2, 1ನೇ ಮೈನ್, ಎಸ್.ಆರ್.ನಗರ ಬೆಂಗಳೂರು–24.		
3.	ಮೆ. ಮಾನ್ಯ ಟೂರ್ಸ್ ಅಂಡ್ ಟ್ರಾವೆಲ್ಸ್, 914, 14ನೇ ಮೈನ್, 4ನೇ ಅಡ್ಡರಸ್ತೆ, ಮಾರುತಿ ಸರ್ಕಲ್,		

	ಹನುಮಂತನಗರ, ಬೆಂಗಳೂರು–560 019		

ನಾಮಫಲಕಗಳ ವಿವರಗಳ ಪಟ್ಟಿ

ಎ) ಹೆದ್ದಾರಿಗಳಲ್ಲಿ ನಾಮಫಲಕಗಳು

ಕ್ರಮ ಸಂ ಖ್ಯೆ	ವಿವರಗಳು	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರಗಳು	ಗುತ್ತಿಗೆಯನ್ನು ಪಡೆದವರ ವಿವರಗಳು	ಒಟ್ಟು ವೆಚ್ಚ ರೂ.
1.	ವಿವಿಧ ಅಳತೆಯ 10 ನಾಮಫಲಕಗಳನ್ನು ಬೆಂಗಳೂರು ನಗರಕ್ಕೆ ಸೇರುವ ಹೆದ್ದಾರಿಗಳಲ್ಲಿ ಅಳವಡಿಸಲಾಗಿತ್ತು.	1. ಮೆ.ಥಾನ್ಸ್ ಅಚೆಡ್ ರೋಸಸ್, 41/46, 8ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ರೋಷನ್ ಕಾಲೋನಿ, ತಿಲಕ್ ನಗರ, ಬೆಂಗಳೂರು–560 041. 2. ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ (ಪೈ) ಲಿಮಿಟೆಡ್, ನಂ.407, 8 'ಬಿ' ಮುಖ್ಯ	ಮೆ.ಥಾನ್ಸ್ ಅಂಡ್ ರೋಸಸ್, 41/46, 8ನೇ ಮುಖ್ಯ ರಸ್ತೆ, 1ನೇ ಅಡ್ಡರಸ್ತೆ, ರೋಷನ್ ಕಾಲೋನಿ, ತಿಲಕ್ ನಗರ. ಬೆಂಳೂರು–560 041.	1172048/–

		ರಸ್ತೆ, 4ನೇ ಬ್ಲಾಕ್ ಜಯನಗರ, ಬೆಂಗಳೂರು-560 011. 3. ಮಲ್ಲಿಗೆ ಔಟ್ ಡೋರ್ಸ್, ನಂ.112/1ಬಿ, 7ನೇ ಮೈನ್ಸ್, 2ನೇ ಫೇಸ್, ಜೆ.ಪಿ.ನಗರ, ಬೆಂಗಳ್ರರು		

ಬಿ) ಮುಖ್ಯನಗರಗಳ ವಿಮಾನ ನಿಲ್ದಾಣದ ಇಬ್ಬದಿಗಳಲ್ಲಿ ನಾಮಫಲಕಗಳು

ಕ್ರಮ ಸಂ ಖ್ಯೆ	ವಿವರಗಳು	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರಗಳು	ಗುತ್ತಿಗೆಯನ್ನು ಪಡೆದವರ ವಿವರಗಳು	ಒಟ್ಟು ವೆಚ್ಚ ರೂ.
1.	ವಿವಿಧ ಅಳತೆಯ 12 ನಾಮಫಲಕಗಳನ್ನು ಬೆಂಗಳೂರು, ಹೈದರಾಬಾದ್, ಚೆನ್ನೈ, ಅಹಮದಾಬಾದ್ ಪೂಣೆ ವಿಮಾನ	1. ಹಾಫ್ ಮೂನ್ ಕನ್ಸಲ್ಟೆಂಟ್ ಇಂಡಿಯಾ, ನಂ.62, 1ನೇ ಮಹಡಿ, ಸಿನಿಮ್ಯಾಕ್ಸ್ ಕಟ್ಟಡ, ವಿಜಯಾ ಸೇಲ್ಸ್ ಇದುರು, ಫೋಡ್	ಕಾನ್ಸೆಪ್ಟ್ಸ ಅಂಡ್ ಕ್ರಿಯೇಷನ್ಸ್, 16/6, ಸಹಾಪುರ ಕಾಲೋನಿ(ಪೂವರ್), ಹೊಸ ಅಲಿಪ್ರೆರೆ ಬ್ಲಾಕ್-ಜೆ, ಕೋಲ್ಕತ್ತಾ-700 -053	563382 2/-

	ಲ್ಡಾಣದ ಇಬ್ಬದಿಗಳಲ್ಲಿ ಅಳವಡಿಸಲಾಗಿತ್ತು. ನಗರಕ್ಕೆ ಸೇರುವ ಹೆದ್ದಾರಿಗಳಲ್ಲಿ ಅಳವಡಿಸಲಾಗಿತ್ತು.	ಬಂದರ್ ರಸ್ತೆ, ಥಾನೆ(ಪಶ್ಚಿಮ), ಮಹಾರಾಷ್ಟ್ರ – 400 606. 2. ಆಕಾಶ್ ಇಂಡಿಯಾ, 15, ಬುಂಗುನ್ ಅವೆನ್ಯೂ, ಬ್ಲಾಕ್–ಎ, ಕೊಲ್ಕತ್ತಾ–700 053. 3. ಕಾನ್ಸೆಪ್ಟ್ಸ ಅಂಡ್ ಕ್ರಿಯೇಷನ್ಸ್, 16/6, ಸಹಾಮರ ಕಾಲೋನಿ(ಪೂವರ್), ಹೊಸ ಅಪೊರೆ ಬ್ಲಾಕ್–ಜೆ, ಕೋಲ್ಕತ್ತಾ–700 053 4. ಕಾರ್ತಿಕ್ ಮಿಡಿಯಾ ಸೊಲ್ಯೂಷನ್ಸ್, ನಂ.19, 2ನೇ ಮಹಡಿ, ಕೆವಿ ಪ್ರಸಾದ್ ಟವರ್ಸ್,		

		ಪುಷ್ಪಾಂಜಲಿ ಥಿಯೇಟರ್ ಕಾಂಪೌಂಡ್, ದಿನ್ನೂರು ಮುಖ್ಯರಸ್ತೆ, ಆರ್.ಟಿ.ನಗರ ಪೋಸ್ಟ್, ಬೆಂಗಳೂರು–560 032.		

ಸಿ) ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ನಾಮಫಲಕಗಳು

ಕ್ರಮ ಸಂ ಖ್ಯೆ	ವಿವರಗಳು	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರಗಳು	ಗುತ್ತಿಗೆಯನ್ನು ಪಡೆದವರ ವಿವರಗಳು	ಒಟ್ಟು ವೆಚ್ಚ ರೂ.
1.	ವಿವಿಧ ಅಳತೆಯ 300 ನಾಮಫಲಕಗಳನು ಉತ್ತರ ಕರ್ನಾಟಕದ ಬೀದರ್, ಗುಲ್ಬರ್ಗಾ, ಬಿಜಾಪೂರ, ಬಾಗಲಕೋಟೆ, ಕೊಪ್ಪಳ, ಬೆಳಗಾಂ, ಧಾರವಾಡ, ಹಾವೇರಿ,	1. ಗಗನ ಅಡ್ವರ್ಟೈಸಿಂಗ್ ಪಾಜ್ಞಾ ಪ್ರಿಂಟ್ಸ್, ನಂ.ಜಿ–2, ಜಿ.ಕೆ. ಕಾಂಪ್ಲೆಕ್ಸ್, ಮೋಹನ್ ಲಾಡ್ಜ್ ಎದುರು, ಎಂ.ಎಸ್.ಕೆ.ಮಿಲ್ ರಸ್ತೆ ಗುಲ್ಬರ್ಗಾ–585 102. 2. ಮೆ.ಪ್ರಿಂಟ್ ಲೈನ್, 2ನೇ	ಜೇಂಕಾರ್ ಅಡ್ವರ್ಟೈಸಿಂಗ್ ರೂ.947/168, 1ನೇ ಮಹಡಿ, ರೈತಬಂದು ಭವನ, ಎನ್‌ಐಐಟಿ ಹತ್ತಿರ, 2ನೇ ಮೈನ್, 4ನೇ ಬ್ಲಾಕ್, ರಾಜಾಜಿನಗರ	3107746 /–

	ಶಿವಮೊಗ್ಗ ಹಾಗೂ ಕಾರವಾರ ಅಳವಡಿಸಲಾಗಿತ್ತು	ಅಡ್ಡರಸ್ತೆ, ಗಾರ್ಡನ್ ಏರಿಯಾ, ಶಿವಮೊಗ್ಗ--577 201. 3. ಜೇಂಕಾರ್ ಅಡ್ವರ್ಟೈಸಿಂಗ್, ನಂ.947/168, 1ನೇ ಮಹಡಿ, ರೈತಬಂದು ಭವನ, ಎನ್‌ಐಐಟಿ	ಬೆಂಗಳೂರು-10	

ಡಿ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಾರ್ತಾ ಇಲಾಖೆಯ ನಾಮಫಲಕಗಳು

ಕ್ರಮ ಸಂಖ್ಯೆ	ವಿವರಗಳು	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರಗಳು	ಗುತ್ತಿಗೆಯನ್ನು ಪಡೆದವರ ವಿವರಗಳು	ಒಟ್ಟು ವೆಚ್ಚ ರೂ.
1.	ವಿವಿಧ ಅಳತೆಯ ವಾರ್ತಾ ಇಲಾಖೆಯ 186 ನಾಮಫಲಕಗಳಲ್ಲಿ ಪ್ರಚಾರವನ್ನು ಮಾಡಲಾಗಿದೆ.	1. ಮೆ.ಥಾನ್ಸ್ ಅಂಡ್ ರೋಸಸ್, 41/46, 8ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ರೋಷನ್ ಕಾಲೋನಿ, ತಿಲಕ್ ನಗರ,	ಮೆ.ಥಾನ್ಸ್ ಅಂಡ್ ರೋಸಸ್, 41/46, 8ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ರೋಷನ್ ಕಾಲೋನಿ, ತಿಲಕ್‌ನಗರ,	1793768/-

		ಬೆಂಗಳೂರು–560 041. 2. ಮೆ.ಪ್ರಿಂಟ್ ಲೈನ್, 2ನೇ ಅಡ್ಡರಸ್ತೆ, ಗಾರ್ಡ್‌ನ್ ಏರಿಯಾ, ಶಿವಮೊಗ್ಗ–577 201. 3. ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ (ಪೈ) ಲಿಮಿಟೆಡ್, ನಂ.407, 8 'ಬಿ' ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560 011.	ಬೆಂಗಳೂರು–560 041.	
2.	ಬೆಂಗಳೂರು ನಗರದಲ್ಲಿ ಪ್ರಚಾರ ಮಾಡಿದ ವೆಚ್ಚ	ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ (ಪೈ) ಲಿಮಿಟೆಡ್, ನಂ.407, 8 'ಬಿ'	ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ (ಪೈ) ಲಿಮಿಟೆಡ್, ನಂ.407, 8 'ಬಿ'	4359172 /–

		ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು-560 011.	ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು-560 011.	

ಸಿಸಿಟಿವಿ ವಿವರಗಳ ಪಟ್ಟಿ:

ಭದ್ರತೆಯ ದೃಷ್ಟಿಯಿಂದ ದಿನಾಂಕ 3 ಮತ್ತು 4ನೇ ಜೂನ್ 2010 ರಂದು ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಸಮಾರಂಬಕ್ಕೆ ಸಿಸಿ ಟಿವಿಗಳನ್ನು ಅಳವಡಿಸಲಾಗಿತ್ತು. ಅವುಗಳ ವಿವರ ಈ ಕೆಳಗಿನಂತಿದೆ.

ಕ್ರಮ ಸಂ ಖ್ಯೆ	ವಿವರಗಳು	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರಗಳು	ಗುತ್ತಿಗೆಯನ್ನು ಪಡೆದವರ ವಿವರಗಳು	ಒಟ್ಟು ವೆಚ್ಚ ರೂ.
1	ವಿವಿಧ ನಮೂನೆಯ ಒ 36 ಸಿಸಿ ಟಿವಿಗಳನ್ನು ಅಳವಡಿಸಲಾತಿದೆ.	1. ಮೆ.ಸೋಮಿಂದ್ರ ಮಾರ್ಕೆಟಿಂಗ್, 2ನೇ ಮಹಡಿ, ಪ್ರೀತಿ ಆಶಿಯಾನ, ಶಿರೂರ್ ಪಾರ್ಕ್, ಶೀರೂರ್ ಪಾರ್ಕ್ ಸರ್ಕಲ್, ವಿಧ್ಯಾನಗರ, ಹುಬ್ಬಳ್ಳಿ-580 029. 2. ಮೆ. ಟೆಕ್ನೋ ಮಾರ್ಕೆಂಟಿಂಗ್ ಕಾರ್ಪೊರೇಷನ್ ನಂ.8, 3ನೇ ಮಹಡಿ,	ಮೆ.ಸೊಮಿಂದ್ರ ಮಾರ್ಕೆಟಿಂಗ್, 2ನೇ ಮಹಡಿ, ಪ್ರೀತಿ ಆಶಿಯಾನ, ಶಿರೂರ್ ಪಾರ್ಕ್, ಶಿರೂರ್ ಪಾರ್ಕ್ ಸರ್ಕಾಲ್,	1100000/-

		ಲಕ್ಷ್ಮೀ ಕಾಂಪ್ಲೆಕ್ಸ್, ನೀಲಿಜಿನ್ ರಸ್ತೆ, ಹುಬ್ಬಳ್ಳಿ–580 029. 3. ಮೆ.ಸೇಫ್ ಜೆನ್ ಸೆಕ್ಯೂರ್ ಟೆಕ್, ನಂ.464, 3ನೇ ಮಹಡಿ, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು–560 079	ವಿದ್ಯಾನಗರ, ಹುಬ್ಬಳ್ಳಿ–580 029.	

ತುರುವೇಕೆರೆ ತಾಲ್ಲೂಕಿನಲ್ಲಿ ಏತ ನೀರಾವರಿ ಕಾಮಗಾರಿಗಳು

10(10) ಶ್ರೀ ಎಂ.ಟಿ.ಕೃಷ್ಣಪ್ಪ:(ತುರುವೇಕೆರೆ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ, ಅಮ್ಮಸಂದ್ರ, ಅರೇಮಾರನಹಳ್ಳಿ, ಮುದ್ದನಹಳ್ಳಿ ಗ್ರಾಮಗಳಿಗೆ ಏತ ನೀರಾವರಿ ಕಾಮಗಾರಿಗೆ ಚಾಲನೆ ನೀಡಲಾತ್ತದೆಯೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು ಮತ್ತು ಅದರ ಅಂದಾಜು ವೆಚ್ಚವೆಷ್ಟು?

ಇ) ಏತ ನೀರಾವರಿ ಕಾಮಗಾರಿಯನ್ನು ಎಷ್ಟು ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವುದು ಹಾಗೂ ಇದರಿಂದಾಗಿ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಲಭಿಸುವುದು, (ವಿವರವಾದ ಮಾಹಿತಿ ನೀಡುವುದು).

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು):

ಅ) ಇಲ್ಲ. ಹೇಮಾವತಿ ಯೋಜನೆಯ ನಾಗಮಂಗಲ ಶಾಖಾ ನಾಲೆಯ ಸರಪಳಿ 43150 ಮೀ ನಿಂದ 16.10 ಕ್ಯೂಸೆಕ್ಸ್ (29.11 ಎಂ.ಸಿ.ಎಫ್.ಟಿ) ನೀರನ್ನು ಎತ್ತಿ ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ, ಅರೆಮಾರನಹಳ್ಳಿ ಮತ್ತು ಇತರೆ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ